**ಧಿಕ್ಕಾರ.** ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಎಸಗುವ ಕಾಮಪಿಶಾಚಿಗಳಿಗೆ ಇಡೀ ದೇಶ ಕೂಗುತ್ತಿದೆ ಧಿಕ್ಕಾರ. ದೆಹಲಿ, ತೆಲಂಗಾಣ, ಜಮ್ಮು, ಉತ್ತರಪ್ರದೇಶ, ಕಲಬುರ್ಗಿ – ಕ್ರೌರ್ಯದ ಕಥೆಗಳು ದೇಶದ ವಿವಿಧ ಭಾಗಗಳಿಂದ ವರದಿಯಾಗುತ್ತಲೇ ಇವೆ. ಅತ್ಯಾಚಾರ ಸಂತ್ರಸ್ತೆಯ ಮೇಲೆ ಆರೋಪಿಯೇ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ ಘಟನೆಯೂ ನಡೆದಿದೆ. ಈ ಘಟನೆಗಳಿಗೆ ಪ್ರತಿಕ್ರಿಯೆ ಎನ್ನುವಂತೆ ಹೈದರಾಬಾದ್‌ನಲ್ಲಿ ನಾಲ್ವರು ಅತ್ಯಾಚಾರ ಆರೋಪಿಗಳನ್ನು ಪೊಲೀಸರು ಎನ್‌ಕೌಂಟರ್ ಮಾಡಿದ್ದಾರೆ. ಇವೆಲ್ಲವೂ ನಾಗರಿಕ ಸಮಾಜ ನಿಟ್ಟುಸಿರುಬಿಡಬೇಕಾದ ಘಟನೆಗಳೇ. ಭಾವುಕತೆ ಹಾಗೂ ಅಸಹಾಯಕತೆ ಬೆರೆತ ಈ ಸಂದರ್ಭ ನಮ್ಮ ಸಮಾಜದ ವಿಶ್ಲೇಷಣೆಗೆ ಕಾರಣವಾಗಬೇಕು. ಅತ್ಯಾಚಾರ ಏಕೆ ನಡೆಯುತ್ತದೆ? ಕ್ರೌರ್ಯದ ಆ ಮನೋವೃತ್ತಿ ಹೇಗೆ ರೂಪುಗೊಳ್ಳುತ್ತದೆ? ಇದಕ್ಕೆ ಪರಿಹಾರವೇನು? ಪೈಶಾಚಿಕ ಕೃತ್ಯಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ನೈತಿಕ ಶಿಕ್ಷಣವನ್ನು ಹೇಗೆ ಸಾಧ್ಯವಾಗಿಸುವುದು? ಲೈಂಗಿಕತೆಯ ಬಗ್ಗೆ ಅರಿವು ಮೂಡಿಸುವುದು ಹೇಗೆ? ಗಂಡಿನೊಳಗಿನ ಮೃಗೀಯ ಪ್ರವೃತ್ತಿಗೆ ಕಡಿವಾಣ ಹಾಕುವುದು ಹೇಗೆ? ಹೆಣ್ಣುಮಕ್ಕಳನ್ನು ಸಬಲೆಯರನ್ನಾಗಿಸುವುದು ಹೇಗೆ? ಕಾನೂನಿನ ಅಳ್ಳಕಗಳನ್ನು ಸರಿಪಡಿಸುವುದು ಹೇಗೆ? ಇಂಥ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಮೂಲಕ ಸಮಾಜವನ್ನು ಬೇರುಮಟ್ಟದಲ್ಲಿ ಮಾನವೀಯಗೊಳಿಸಬೇಕಾದ ಜರೂರು ಅಗತ್ಯ ಇಂದಿನದು. ಈ ಮಾನವೀಯ ಪ್ರಕ್ರಿಯೆಯ ಭಾಗವಾಗಿ ಹಾಗೂ ‘ಸುಧಾ’ ತನ್ನ ಸಾಮಾಜಿಕ ಜವಾಬ್ದಾರಿಯನ್ನು ವ್ಯಕ್ತಪಡಿಸುವ ನಿಟ್ಟಿನಲ್ಲಿ ‘ಅತ್ಯಾಚಾರ ವಿರೋಧಿ ಸಂಚಿಕೆ’ಯನ್ನು ರೂಪಿಸಿದೆ. ಸಮಾಜದ ವಿಭಿನ್ನ ವಲಯಗಳ ಸೂಕ್ಷ್ಮ ಮನಸ್ಸುಗಳ ಸಹಭಾಗಿತ್ವದಲ್ಲಿ ಈ ಸಂಚಿಕೆ ರೂಪುಗೊಂಡಿದೆ. ಈ ಸಂಚಿಕೆ ನಿಮಗೆ ಇಷ್ಟವಾಗುತ್ತದೆ, ಇದೊಂದು ವಿಶಿಷ್ಟ ಪ್ರಯತ್ನ ಎಂದೆಲ್ಲ ನಾವು ಹೇಳುವುದಿಲ್ಲ; ಇದು ಈ ಹೊತ್ತಿಗೆ ಅಗತ್ಯವಾದ ಪ್ರಾಂಜಲ ಪ್ರಯತ್ನವೆಂದಷ್ಟೇ ಓದುಗರ ಗಮನಕ್ಕೆ ತರಲು ಬಯಸುತ್ತೇವೆ. ಇಲ್ಲಿನ ಬರಹಗಳನ್ನು ನೀವು ಓದುವ ಜೊತೆಗೆ, ನಿಮ್ಮ ಮಕ್ಕಳಿಗೆ, ನೆರೆಹೊರೆಯವರಿಗೆ, ಬಂಧುಮಿತ್ರರಿಗೆ ಓದಿಹೇಳಿ, ಓದುವಂತೆ ಹೇಳಿ. ಇದೊಂದು ಸಾಮೂಹಿಕ ಜವಾಬ್ದಾರಿ. ಸಮಾಜವನ್ನು ತಿಳಿಗೊಳಿಸುವ, ಆರೋಗ್ಯಪೂರ್ಣವಾಗಿಸುವ ನಿಟ್ಟಿನಲ್ಲಿ ‘ಸುಧಾ’ ಕಾಳಜಿ ನಿರಂತರವಾದುದು.

ಈ ಸಂಚಿಕೆಯ ಕುರಿತಂತೆ ಪ್ರತಿಕ್ರಿಯೆಗಳಿಗೆ ಸ್ವಾಗತ.

—ಸಂಪಾದಕ

feedback@sudha.co.in

# ಅತ್ಯಾಚಾರಕ್ಕೆ ಧಿಕ್ಕಾರ

